**ಓ ಎಸ್ ನಂ 209/2016**

**ಡಿ. ಡಬ್ಲ್ಯೂ ः 1**

**ದಿಃ 17.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ः ವಾದಿ ಪರ ಶ್ರೀ ಎನ್ ಎಸ್ ಜಿ ವಕೀಲರಿಂದ ः**

ನಾನು ಡಿಗ್ರಿ ಪದವೀಧರನಾಗಿರುತ್ತೇನೆ. ನನಗೆ ಕನ್ನಡ ಮತ್ತು ಆಂಗ್ಲ ಭಾಷೆ ಓದಲು ಬರುತ್ತದೆ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರಕ್ಕೆ ನಾನೇ ಸಹಿ ಮಾಡಿರುತ್ತೇನೆ. ಸದರಿ ಸಹಿಯನ್ನು ನನ್ನ ವಕೀಲರ ಕಚೇರಿಯಲ್ಲಿ ನಾನು ಮಾಡಿರುತ್ತೇನೆ.

ಸ.ನಂ. 43/1 ಎ ಮತ್ತು ಸ.ನಂ. 43/1 ಬಿ ಯನ್ನು ನನ್ನ ತಾತ ಮೂಲವಾಗಿ ಖರೀದಿ ಮಾಡಿರುತ್ತಾರೆ. ಸದರಿ ಸ.ನಂ. 43/1 ಎ ಮತ್ತು ಸ,ನಂ. 43/1 ಬಿ ಮೂಲತಃ ಸ.ನಂ. 43 ಆಗಿತ್ತು ಎಂದರೆ ಸರಿ. ಮೂಲತಃ ಸ.ನಂ. 43 ಒಟ್ಟಿಗೆ ಜಮೀನು ಇದ್ದಾಗ ಅದರ ಮಾಲೀಕರು ಯಾರೆಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅದನ್ನು ಮರಿಲಿಂಗಯ್ಯ ನವರ ಜಮೀನು ಎಂದು ಕರೆಯುತ್ತಾರೆ ಎಂದು ನುಡಿಯುತ್ತಾರೆ.

ನನ್ನ ತಾತನ ಹೆಸರು ನಂಜಪ್ಪ ಇರುತ್ತದೆ. ನನ್ನ ತಾತ ಬದುಕಿದ್ದಾಗ ನಾನು ಹುಟ್ಟಿರಲಿಲ್ಲ.ನನ್ನ ತಾತ ಖರೀದಿ ಮಾಡಿರುವ ಬಗ್ಗೆ ಕ್ರಯಪತ್ರಗಳನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ನನ್ನ ತಾತ ಖರೀದಿ ಮಾಡಿರುವ ಕ್ರಯಪತ್ರವನ್ನು ನಾನು ನೋಡಿರುತ್ತೇನೆ. ನಿಡಿ 2 ನನ್ನ ತಾತ ಖರೀದಿ ಮಾಡಿರುವ ಕ್ರಯಪತ್ರದ ನಕಲಾಗಿರುತ್ತದೆ.

ನಿಡಿ 2 ರ ಮೂಲ ಪ್ರತಿ ಎಲ್ಲಿರುತ್ತದೆ ಎಂದರೆ ನನ್ನ ಬಳಿ ಇದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಮೂಲಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.ಮರಿಲಿಂಗಯ್ಯ ನವರ ಕುಟುಂಬದವರು ಯಾರು ಯಾರು ನಿಡಿ 2 ರ ಮೂಲ ಪ್ರತಿಯಲ್ಲಿ ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆಂದರೆ ಸಾಕ್ಷಿ ಕೆಂಪಮ್ಮ, ಅಂದಾನಯ್ಯ, ಗವಿಯಪ್ಪ ಮತ್ತು ಇನ್ನು ಇಬ್ಬರು ಸಹಿ ಹಾಕಿರುತ್ತಾರೆ. ದಾವಾ ಬಿ ಶೆಡ್ಯೂಲ್ ಸ್ವತ್ತು ಮೂಲತಃ ಮರಿಲಿಂಗಯ್ಯ ನವರ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿ.

ಮರಿಲಿಂಗಯ್ಯ ನವರ ವಂಶವೃಕ್ಷವನ್ನು ನಾನು ನೋಡಿರುತ್ತೇನೆ. ವಂಶವೃಕ್ಷದ ಮೂಲ ಪ್ರತಿ ನನ್ನ ಹತ್ತಿರ ಇರುವುದಿಲ್ಲ. ನಾನು ಮರಿಲಿಂಗಯ್ಯ ನವರ ವಂಶದ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನ ಮಾಡಿರುವುದಿಲ್ಲ. ದಾವೆ ಹೂಡಿದ ನಂತರವೂ ನಾನು ಮರಿಲಿಂಗಯ್ಯ ನವರ ಕುಟುಂಬದ ಬಗ್ಗೆ ತಿಳಿದುಕೊಂಡಿರುವುದಿಲ್ಲ, ಆದರೆ ದಾವಾ ಸ್ವತ್ತಿಗೆ ಸಂಬಂಧ ಯಾರು ಯಾರು ಸಹಿ ಮಾಡಿರುತ್ತಾರೆ ಎಂದು ನಾನು ತಿಳಿದುಕೊಂಡಿರುತ್ತೇನೆ. ಮರಿಲಿಂಗಯ್ಯ ನವರಿಗೆ ಈ ಆಸ್ತಿಯನ್ನು ಮಾರುವ ಪ್ರತ್ಯೇಕ ಹಕ್ಕು ಇರಲಿಲ್ಲ ಎಂದರೆ ಈ ಆಸ್ತಿಯನ್ನು ಮಾರಾಟ ಮಾಡುವಾಗ ಮರಿಲಿಂಗಯ್ಯ ನವರು ತೀರಿಕೊಂಡಿರಬಹುದು, ಅವರ ಮಕ್ಕಳು ನಮಗೆ ಆಸ್ತಿಯನ್ನು ಮಾರಿರುತ್ತಾರೆ ಎಂದು ನುಡಿಯುತ್ತಾರೆ. ಮರಿಲಿಂಗಯ್ಯ ನವರು ಮೂಲತಃ ಖರೀದಿ ಮಾಡಿದ ಆಸ್ತಿ ದಾವಾ ಬಿ ಶೆಡ್ಯೂಲ್ ಆಗಿರುವುದಿಲ್ಲ, ಬದಲಾಗಿ ಅವರ ತಾತ ಬೈರಯ್ಯ ನವರ ಆಸ್ತಿ ಎಂದರೆ ಇರಬಹುದು. ಬೈರಯ್ಯ ನವರಿಗೆ ಮರಿಲಿಂಗಯ್ಯ ಮತ್ತು ಜೋಗಿ ಸಿದ್ದಯ್ಯ ಎಂಬ ಇಬ್ಬರು ಮಕ್ಕಳಿದ್ದರು ಎಂದರೆ ಸರಿ. ದಾವಾ ಸ್ವತ್ತು ಬೈಲಯ್ಯ ಆಸ್ತಿಯಾಗಿರುವ ಕಾರಣ ಮರಿಲಿಂಗಯ್ಯ ಮತ್ತು ಜೋಗಿ ಸಿದ್ದಯ್ಯ ರವರಿಗೆ ಆಸ್ತಿಯಲ್ಲಿ ಹಕ್ಕು ಬರುತ್ತದೆ ಎಂದರೆ ಸರಿ.

ಮರಿಲಿಂಗಯ್ಯ ನವರಿಗೆ ಒಟ್ಟು 5 ಜನ ಮಕ್ಕಳಿದ್ದರು ಎಂದರೆ ಇರಬಹುದು. ಮರಿಲಿಂಗಯ್ಯ ನವರು 1946 ರಲ್ಲಿ ತೀರಿಕೊಂಡಿದ್ದು, ಅವರ ಎಲ್ಲ ಮಕ್ಕಳಿಗೆ ಸಮಾನವಾದ ಹಕ್ಕು ಇತ್ತು ಎಂದರೆ ಇರಬಹುದು , ಆದರೆ ನಮಗೆ ಅವರ ಮಕ್ಕಳೆಲ್ಲರೂ ಸೇರಿ ಮಾರಿರುತ್ತಾರೆ ಎಂದು ನುಡಿಯುತ್ತಾರೆ. ಎಲ್ಲ ಮಕ್ಕಳು ಸಹಿ ಹಾಕಿರುವುದಿಲ್ಲ, ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸುಳ್ಳು. ನನ್ನ ತಾತ ಕೈ ಬದಲಾವಣೆಗೆ ಸದರಿ ಆಸ್ತಿಯನ್ನು ಉಳುಮೆ ಮಾಡಲು ಪಡೆದಿದ್ದರು, ಯಾವುದೇ ಕ್ರಯದ ವ್ಯವಹಾರ ಮಾಡಿರಲಿಲ್ಲ ಎಂದರೆ ಸುಳ್ಳು. ಮರಿಲಿಂಗಯ್ಯ ನವರ ಕುಟುಂಬದವರು ಇವತ್ತಿಗೂ ಆ ಊರಿನಲ್ಲಿ ಇದ್ದಾರೆ ಎಂದರೆ ಸುಳ್ಳು. ನಾನು ಮರಿಲಿಂಗಯ್ಯ ನವರ ಕುಟುಂಸ್ಥರನ್ನು ಯಾವ ದಿನವೂ ಬೇಟಿಯಾಗಿರುವುದಿಲ್ಲ. ದಾವಾ ಸ್ವತ್ತಿನಲ್ಲಿ ಮರಿಲಿಂಗಯ್ಯ ನವರ ಕುಟುಂಬಸ್ಥರು ಸ್ವಾಧೀನದಲ್ಲಿರುತ್ತಾರೆ, ನಾನು ಅವರ ಸ್ವಾಧೀನಕ್ಕೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸುಳ್ಳು.

ನಿ ಪಿ 1 ಯಾವ ದಾಖಲಾತಿ ಎಂದರೆ ಗೊತ್ತಿಲ್ಲ. ನಿ ಪಿ 1 ರ ಮೂಲಪ್ರತಿ ನನ್ನ ಬಳಿ ಇರುತ್ತದೆ. ಅದನ್ನು ನ್ಯಾಯಾಲಯಕ್ಕೆ ನಾನು ಕೊಡುತ್ತೇನೆ. ನಿ ಡಿ 3 ರ ಮೂಲಪ್ರತಿ ನನ್ನ ಬಳಿ ಇರುತ್ತದೆ. ಅದನ್ನು ನ್ಯಾಯಾಲಯಕ್ಕೆ ನಾನು ಕೊಡುತ್ತೇನೆ. ನಿ ಡಿ 3 ರ ಮೂಲ ಪ್ರತಿಯನ್ನು ನನಗೆ ಓದಲು ಆಗುವುದಿಲ್ಲ. ನಿ ಡಿ 4 ರ ಪ್ರಕಾರ ಬೈರಯ್ಯ ನವರ ಮೊಮ್ಮಕ್ಕಳು ಯಾರು ಸಹಿ

ಮಾಡಿರುವುದಿಲ್ಲ ಎಂದರೆ ಮಾಡಿರುತ್ತಾರೆ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸುಳ್ಳು. ನನ್ನ ತಾತ ಬೈರಯ್ಯ ನವರ ಮಕ್ಕಳು ಮತ್ತು ಮೊಮ್ಮಕ್ಕಳ ಹತ್ತಿರ ಸ.ನಂ. 43/1 ಎ ಜಮೀನನ್ನು ಖರೀದಿ ಮಾಡಿರುತ್ತಾರೆ. ಸ.ನಂ. 43/1 ಬಿ ಯನ್ನು ನಮ್ಮ ತಾತ ಮುದ್ದಹನುಮಯ್ಯ ನವರ ಹತ್ತಿರ ಖರೀದಿ ಮಾಡಿರುತ್ತಾರೆ. ಸ.ನಂ. 43/1 ಬಿ ಮತ್ತು 43/2 ರ ಮೂಲತಃ ಮಾಲೀಕರು ಯಾರೆಂದರೆ ನನಗೆ ಗೊತ್ತಿಲ್ಲ. ಮುದ್ದಹನುಮಯ್ಯ ನವರ ಹತ್ತಿರ ಪಡೆದುಕೊಂಡಿರುವ ಮೂಲ ದಾಖಲಾತಿ ನನ್ನ ಹತ್ತಿರ ಇರುತ್ತದೆ. ಮುದ್ದಹನುಮಯ್ಯ ನವರಿಗೆ ಮೂಲತಃ ಈ ಆಸ್ತಿಯನ್ನು ಮಾರಾಟ ಮಾಡಲು ಯಾವುದೇ ಅಧಿಕಾರ ಇರಲಿಲ್ಲ ಎಂದರೆ ಗೊತ್ತಿಲ್ಲ. ನನ್ನ ತಾತ ಆಸ್ತಿಯನ್ನು ಉಳುಮೆ ಮಾಡಲು ಪಡೆದಿದ್ದರು ಎಂದರೆ ಸುಳ್ಳು.

ಮರಿಲಿಂಗಯ್ಯ ನವರಿಗೆ ಮೂಲತಃ ಸ.ನಂ. 43/1 ರಲ್ಲಿ ಎಷ್ಟು ಜಮೀನಿತ್ತು ಎಂದು ಗೊತ್ತಿಲ್ಲ. ನನ್ನ ತಾತ ನಂಜಪ್ಪ ನವರು ಸ.ನಂ. 43/1 ರಲ್ಲಿ ಎಷ್ಟು ಜಮೀನು ಖರೀದಿ ಮಾಡಿದ್ದರು ಎಂದರೆ ಸಾಕ್ಷಿ ನನ್ನ ತಾತ ಸ.ನಂ. 43/1 ಎ ನ್ನು ಖರೀದಿ ಮಾಡಿದ್ದರು ಎಂದು ನುಡಿಯುತ್ತಾರೆ. ನಂಜಪ್ಪ ನವರು ಉಳುಮೆ ಮಾಡುತ್ತಿದ್ದರು ಎಂದು ತೋರಿಸಲು ಯಾವುದಾದರೂ ದಾಖಲಾತಿಗಳನ್ನು ನೀಡಿದ್ದೀರಾ ಎಂದರೆ ಸಾಕ್ಷಿ ಯಾವುದೇ ದಾಖಲಾತಿಗಳನ್ನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ನಂಜಪ್ಪ ನವರ ಸ್ವಾಧೀನದಲ್ಲಿದ್ದರು ಎಂದು ತೋರಿಸಲು ನಾನು ಯಾವುದೇ ದಾಖಲಾತಿಗಳನ್ನು ನೀಡಿರುವುದಿಲ್ಲ, ಪಹಣಿಯನ್ನು ನೀಡಿರುತ್ತೇನೆ. ಆರ್ ಟಿ ಸಿ ಯನ್ನು ಹೊರತುಪಡಿಸಿ ಯಾವುದೇ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿ 1 ರಿಂದ 4 ರವರು ಶಾಮೀಲಾಗಿ ಸುಳ್ಳು ದಾವೆಯನ್ನು ಹೂಡಿದ್ದಾರೆಂದು ನನ್ನ ಹತ್ತಿರ ಯಾವುದಾದರೂ ಸಾಕ್ಷಿ ಇದೆಯೋ ಎಂದರೆ ಇಲ್ಲ.

ಸ.ನಂ. 43 ಮೂಲ ಸ.ನಂ. 43/1 ಆಗಿ ನಂತರ ಸ.ನಂ. 43/1 ಎ , 43/1 ಬಿ ಮತ್ತು ಸ.ನಂ. 43/2 ಆಗಿರುತ್ತದೆ ಎಂದರೆ ಸರಿ. ದಾವಾ ಸ್ವತ್ತು ವಾದಿಗಳ ಕುಟುಂಬಕ್ಕೆ ಸೇರಿದ ಸ್ವತ್ತಾಗಿದ್ದು ಸದರಿ ಸ್ವತ್ತನ್ನು ಹೊಡೆಯುವ ಉದ್ದೇಶದಿಂದ ನಾನು ದಾಖಲಾತಿಗಳನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ, ವಾದಿ ಮತ್ತು ಪ್ರತಿವಾದಿ 1 ರಿಂದ 4 ರವರು ಒಟ್ಟು ಕುಟುಂಬದವರು ಎಂದರೆ ಗೊತ್ತಿಲ್ಲ. ದಾವಾ ಸ್ವತ್ತಿನ ಮೂಲ ದಾಖಲಾತಿಗಳನ್ನು ಬೇಕೆಂತ ನ್ಯಾಯಾಲಯಕ್ಕೆ ನೀಡಿಲ್ಲ ಎಂದರೆ ಸರಿಯಲ್ಲ, ಕೇಳಿಲ್ಲ ನಾನು ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಎಲ್ಲ ದಾಖಲಾತಿಗಳನ್ನು ನಾನು ಮುಂದಿನ ದಿನಾಂಕದಂದು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ಸುಳ್ಳು ದಾಖಲಾತಿಗಳನ್ನು ಸೃಷ್ಟಿ ಮಾಡಿಕೊಂಡು ವಾದಿಗಳಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,

ಮಾಗಡಿ.